ಅ.ದಾ. ನಂ. 124/16 ಡಿ.ಡಬ್ಲ್ಯೂ-1

ದಿನಾಂಕಃ 03.06.2026 ರಂದು ಡಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ದಾವಾ ಸ್ವತ್ತಿನ ಸ.ನಂ. ಏನು ಎಂದರೆ 71/2 27 ಗುಂಟೆ. ಸದರಿ ಸ್ವತ್ತಿನ ದಾಖಲಾತಿ ಯಾರ ಹೆಸರಿನಲ್ಲಿದೆ ಎಂದರೆ 1ನೇ ವಾದಿಯ ಗಂಡನ ಹೆಸರಿನಲ್ಲಿರುತ್ತದೆ. ಪ್ರತೀ ವರ್ಷ ಜಮಾಬಂಧಿ ಮಾಡಿ ಖಾತೆಯನ್ನು ನಮೂದಿಸಿರುತ್ತಾರೆ ಎಂದರೆ ಸರಿ. ಸ್ಥಳದಲ್ಲಿ ಸ್ವಾಧೀನ ಪರೀಶೀಲಿಸಿ ಖಾತೆ ನಮೂದಿಸುತ್ತಾರೆ ಎಂದರೆ ಸರಿಯಲ್ಲ. ಸ್ವಾಧೀನದಲ್ಲಿ ಯಾರು ಇರುತ್ತಾರೆ ಅವರಿಗೆ ಕಂದಾಯ ವಸೂಲು ಮಾಡುತ್ತಾರೆ ಎಂದರೆ ಸರಿಯಲ್ಲ. ಖಾತೆ ಇರುವವರ ಹೆಸರಿನಿಂದ ಕಂದಾಯ ವಸೂಲಿ ಮಾಡುತ್ತಾರೆ. 1ನೇ ವಾದಿಯ ಗಂಡನ ಹೆಸರಿನಲ್ಲಿ ಖಾತೆ ಇರುವ ಕಾರಣ ವಾದಿಯಿಂದ ಕಂದಾಯ ವಸೂಲಿ ಮಾಡಿರುತ್ತಾರೆ ಎಂದರೆ ಸರಿ. 1988-89 ರಿಂದ ದಾವಾ ಸ್ವತ್ತಿನ ಸ್ವಾಧೀನದಲ್ಲಿ ವಾದಿಗಳಿದ್ದು ಅದು ನಮಗೂ ತಿಳಿದಿರುತ್ತದೆ ಎಂದರೆ ಸರಿಯಲ್ಲ. ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿಯುತ್ತಾರೆ. ಖಾತೆಯು 1ನೇ ವಾದಿಯ ಮಾವನ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಶಿವಮೂರ್ತಿಯವರ ಹೆಸರಿಗೆ ಖಾತೆ ಬರುವ ಪೂರ್ವದಲ್ಲಿ ಅವರ ತಂದೆ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ಸರಿಯಲ್ಲ. ಶಿವಮೂರ್ತಿಯವರು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವ ವಿಚಾರ ನನ್ನ ತಂದೆ ತಾಯಿಗೂ ಸಹ ತಿಳಿದಿರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾವೇ ಸ್ವಾಧೀನದಲ್ಲಿದ್ದೆವು ಎಂದು ನುಡಿಯುತ್ತಾರೆ. ಯಾವಾಗ ವಾದಿಗಳ ಹೆಸರಿನಲ್ಲಿರುವ ಖಾತೆ ನನಗೆ ತಿಳಿದಿರುತ್ತದೆ ಎಂದರೆ 2015. 2015 ರಲ್ಲಿ ಶಿವಮೂರ್ತಿಯವರನ್ನು ಖಾತೆಯ ಬಗ್ಗೆ ವಿಚಾರಿಸಿರುತ್ತೇನೆ ಎಂದರೆ ಸರಿ. 2015 ರ ಪೂರ್ವದಲ್ಲೂ ಸಹ ನನ್ನ ತಾಯಿ ಶಿವಮೂರ್ತಿಯವರನ್ನು ಖಾತೆಯ ಬಗ್ಗೆ ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು ವರ್ಷಗಳಿಂದ ವಾದಿಗಳು ಅವರ ಪೂರ್ವಜರ ಕಾಲದಿಂದಲೂ ದಾವಾ ಸ್ವತ್ತಿನ ಸ್ವಾಧೀನ ಹೊಂದಿ ಅನುಭವಿಸುತ್ತಿದ್ದಾರೆ

ಎಂದರೆ ಸರಿಯಲ್ಲ.

2. ವಾದಿಯ ಹೆಸರಿನಲ್ಲಿರುವ ಖಾತೆಯ ಬಗ್ಗೆ ತಿಳಿದುಕೊಂಡ ನಂತರ ಎ.ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೀರ ಎಂದರೆ ಇಲ್ಲ. ಸದರಿ ಪ್ರಕರಣ ಹೂಡಲು ತೊಂದರೆ ಇತ್ತ ಎಂದರೆ ಖಾತೆ ನನಗೆ ಮಾಡಿಕೊಡಲು ಅವರು ಒಪ್ಪಿರುತ್ತಾರೆ. ವಾದಿಯರ ಹೆಸರಿನಲ್ಲಿರುವ ಖಾತೆಯ ಬಗ್ಗೆ ನನ್ನ ತಂದೆ ತಾಯಿಗೆ ಗೊತ್ತಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸ್ವಾಧೀನದಲ್ಲಿ ನಾವೇ ಇದ್ದೆವು ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.